*O.S./26/2013*
*D.W-1*

(ಸಾಕ್ಷಿಗೆ ದಿನಾಂಕ: 20.06.2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀಮತಿ ಜೆ.ಹೆಚ್., ಪ್ರತಿವಾದಿಗಳ ಪರ ವಕೀಲರಿಂದಃ**

ಪ್ರಸ್ತುತ ದಾವೆಯಲ್ಲಿ ನಾನು ಪ್ರತಿವಾದಿ ಸಂಖ್ಯೆ 1(ಎ) ಆಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನನ್ನ ಪ್ರತಿವಾದ ಪತ್ರಕ್ಕೆ ಪೂರಕವಾಗಿ ಮಧ್ಯಂತರ ಅರ್ಜಿಯೊಂದಿಗೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ದಿನಾಂಕಃ 17.03.1952 ರ ನೋಂದಾಯಿತ ಮೂಲ ದಾನ ಪತ್ರವನ್ನು ನಿ.ಡಿ.1 ಎಂದು, ದಿನಾಂಕಃ 25.02.1987 ರ ನೋಂದಾಯಿತ ಮೂಲ ಕ್ರಯ ಪತ್ರವನ್ನು ನಿ.ಡಿ.2 ಎಂದು, ದಿನಾಂಕಃ 24.04.2014 ರ ನೋಂದಾಯಿತ ಮೂಲದ ದಾನಪತ್ರವನ್ನು ನಿ.ಡಿ.3 ಎಂದು, ಹಕ್ಕು ಬದಲಾವಣೆ ವಹಿಯ ದೃಢೀಕೃತ ನಕಲನ್ನು ನಿ.ಡಿ.4 ಎಂದು, ಐದು ಪಹಣಿ ಪತ್ರಿಕೆಗಳನ್ನು ಅನುಕ್ರಮವಾಗಿ ನಿ.ಡಿ.5 ರಿಂದ 9 ಎಂದು, ದಿನಾಂಕಃ 22.02.1960 ರ ಮೂಲ ಅಡಮಾನ ಪತ್ರವನ್ನು ನಿ.ಡಿ.10 ಎಂದು ಗುರುತಿಸಲಾಯಿತು.

ನಿ.ಡಿ.1 ದಾಖಲೆಯನ್ನು ನನ್ನ ತಾತ ಲಕ್ಕಶೆಟ್ಟಿರವರು ನನ್ನ ತಾಯಿಯಾದ ಚನ್ನಮ್ಮರವರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ದಾನಪತ್ರಕ್ಕೆ ಸಹಿ ಹಾಕಿದ ಸಾಕ್ಷಿದಾರರು ಈಗ ಮೃತಪಟ್ಟಿರುತ್ತಾರೆ. ನನ್ನ ತಾಯಿ ಮೃತಪಟ್ಟಿರುತ್ತಾರೆ.

***ಈ ಹಂತದಲ್ಲಿ ಕಡತದಲ್ಲಿರುವ ದಿನಾಂಕಃ 24.04.2014 ರ ಮರಣ ಶಾಸನ ಪತ್ರವನ್ನು ನಿಶಾನೆಯಾಗಿ ಗುರುತಿಸುವ ಕುರಿತು ವಾದವನ್ನು ಆಲಿಸಲು ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

*ಸಹಿ/-*
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.